ಶಿರಡಿ ಸಾಯಿ ಸೇವಾ ಟ್ರಸ್ಟ್ ಕ್ಯಾಲೆಂಡರ್ ಬಿಡುಗಡೆ

ಆಧ್ಯಾತ್ಮಿಕ ಒಲವಿನ ತಂಡಕ್ಕೆ ಶುಭ ಕೋರಿದ ಮಾಜಿ ಸಚಿವ ಎಸ್.ಎ.ರಾಮದಾಸ್

ಶಿರಡಿ ಬಾಬಾ ಭಾವಚಿತ್ರದೊಂದಿಗೆ ಶ್ರೀ ಶಿರಡಿ ಸಾಯಿ ಸೇವಾ ಟ್ರಸ್ಟ್ ಹೊರತಂದಿರುವ ಕ್ಯಾಲೆಂಡರನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ತಮ್ಮ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಸಂತೋಷ್, ಟ್ರಸ್ಟ್ ಅಧ್ಯಕ್ಷ ಆರ್.ರವಿಕುಮಾರ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು,ಜ.೧೦– ಆಧ್ಯಾತ್ಮಿಕ ಜೀವನದ ಮೂಲಕ ಪ್ರೇರಣೆ ಪಡೆದ ಯುವಕರ ತಂಡವೊಂದು ಸದ್ದಿಲ್ಲದೇ ಸಮಾಜ ಸೇವೆ ಮಾಡುತ್ತ ಸಾರ್ವಜನಿಕರಿಂದ ಮೆಚ್ಚುಗೆ ಗಳಿಸುತ್ತಿದೆ.

ನಗರದ ಸುಣ್ಣದಕೇರಿ ನಿವಾಸಿ ರಾಜು ಮತ್ತು ಲೀಲಾವತಿ ದಂಪತಿ ಪುತ್ರ ಆರ್.ರವಿಕುಮಾರ್, ಶ್ರೀ ಶಿರಡಿ ಸಾಯಿ ಬಾಬಾ ಮೇಲೆ ಅಪಾರ ಒಲವು ತಾಳಿದ್ದಾರೆ. ಅಲ್ಲದೇ ೨೦ಕ್ಕೂ ಹೆಚ್ಚು ಯುವಕರನ್ನು ಕಟ್ಟಿಕೊಂಡು ಅವರ ಮನಸ್ಸನ್ನು ಅಧ್ಯಾತ್ಮದ ಕಡೆ ವಾಲಿಸಿ, ಅವರಿಂದಲೂ ಸಮಾಜ ಸೇವೆ ಮಾಡಿಸುತ್ತಿದ್ದಾರೆ.

ದ್ವಿತೀಯ ಪಿಯುಸಿ ವ್ಯಾಸಂಗ ಪೂರ್ಣಗೊಳಿಸಿರುವ ರವಿಕುಮಾರ್, ಆಪ್ತರು ಹಾಗೂ ಸಂಬಂಧಿಗಳ ನಡುವಿನ ಒಡನಾಟದಿಂದ ಕೆಲ ಕಹಿ ಘಟನೆಗಳಿಂದ ಬೇಸರಗೊಂಡಿದ್ದರು. ಇದರಿಂದ ಹೊರಬರಬೇಕು ಎನ್ನುವ ದೃಢ ನಿರ್ಧಾರದಿಂದ ಆಧ್ಯಾತ್ಮಕದ ಕಡೆ ಮುಖ ಮಾಡಿದ ಪರಿಣಾಮ ಜೀವನದಲ್ಲಿ ಒಳ್ಳೆಯ ಬೆಳವಣಿಗೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ಸ್ವಂತ ದುಡಿಮೆಯ ಫಲದಿಂದ ಡ್ರೈವಿಂಗ್ ಸ್ಕೂಲ್ ತೆರೆದಿದ್ದಾರೆ. ಶ್ರೀ ಶಿರಡಿ ಸಾಯಿ ಬಾಬಾ ಸೇವಾ ಟ್ರಸ್ಟ್ ರಚಿಸಿಕೊಂಡು, ಸದಸ್ಯ ಯುವಕರು ತಮ್ಮ ಸಂಪಾದನೆಯ ಕೆಲ ಭಾಗವನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸುತ್ತಿದ್ದಾರೆ.

೫ ವರ್ಷಗಳಿಂದ ಶಿರಡಿ ಬಾಬಾ ಭಾವಚಿತ್ರವುಳ್ಳ ಕ್ಯಾಲೆಂಡರ್‌ಗಳನ್ನು ಮುದ್ರಿಸಿ, ಸಾರ್ವಜನಿಕರು ಹಾಗೂ ಸುಣ್ಣದಕೇರಿ ನಿವಾಸಿಗಳಿಗೆ ಹಂಚುತ್ತಾ ಬಂದಿದ್ದಾರೆ. ಈ ವರ್ಷದ ಕ್ಯಾಲೆಂಡರ್‌ಅನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ತಮ್ಮ ಕಚೇರಿಯಲ್ಲಿ ಬಿಡುಗಡೆಗೊಳಿಸಿ, ತಂಡಕ್ಕೆ ಶುಭ ಕೋರಿದರು.

ಆರೆಸ್ಸೆಸ್ ನಿಷೇಧಕ್ಕೆ ದಿನೇಶ್ ಗುಂಡೂರಾವ್ ಆಗ್ರಹ

ಬೆಂಗಳೂರು,ಜ.೧೦–ನಿಜವಾದ ಜೆಹಾದಿಗಳಾಗಿರುವ ಆರೆಸ್ಸೆಸ್ ಹಾಗೂ ಭಜರಂಗದಳವನ್ನು ಮೊದಲು ನಿಷೇಧಿಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ನಗರದ ಮೌರ್ಯ ಸರ್ಕಲ್‌ನಲ್ಲಿ ಮೂಡಿಗೆರೆಯ ಧನ್ಯಶ್ರೀ ಮೇಲೆ ನಡೆದ ಲೈಂಗಿಕ ದೌರ್ಜನ್ಯ ವಿರೋಧಿಸಿ ಎನ್‌ಎಸ್‌ಯುಐ ಬುಧವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಮಾಜದ ಶಾಂತಿ ಕದಡುತ್ತಿರುವ ಶೋಭಾ ಕರಂದ್ಲಾಜೆ, ಅನಂತ ಕುಮಾರ್ ಹೆಗಡೆ ಭಯೋತ್ಪಾದಕರಲ್ಲವೇ ಎಂದು ಮುಖ್ಯಮಂತ್ರಿಗಳ ಹೇಳಿಕೆಯನ್ನು ಸಮರ್ಥಿಸಿಕೊಂಡರು.

ಹಿಂದೂ ಸಂಘಟನೆ ಹೆಸರಿನಲ್ಲಿ ಸಮಾಜದ ಶಾಂತಿ ಕದಡುವವರು ಭಯೋತ್ಪಾದಕರಲ್ಲದೆ ಬೇರೇನು ಎಂದು ಪ್ರಶ್ನಿಸಿದರು.

ದೀಪಕ್ ರಾವ್, ಪ್ರವೀಣ್ ಪೂಜಾರಿ ಬಗ್ಗೆ ಮಾತನಾಡುವ ಬಿಜೆಪಿ ನಾಯಕರು, ಲೈಂಗಿಕ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಧನ್ಯಶ್ರೀ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಧನ್ಯಶ್ರೀ ಹಿಂದೂ ಅಲ್ಲವೇ ? ಎಂದು ಪ್ರಶ್ನಿಸಿದರು.

ಧನ್ಯಶ್ರೀ ಆತ್ಮಹತ್ಯೆ ಪ್ರಕರಣದಲ್ಲಿ ಬಜರಂಗದಳದ ಮುಖಂಡನ ಹೆಸರು ಕೇಳಿ ಬರುತ್ತಿರುವುದರಿಂದ ಬಿಜೆಪಿಯವರು ಮಾತನಾಡುತ್ತಿಲ್ಲ. ಶೋಭಾ ಕರಂದ್ಲಾಜೆ ಯಾವ ಸಿದ್ಧಾಂತದಲ್ಲಿದ್ದಾರೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದರು.

ತಿ.ನರಸೀಪುರ ಹಾಗೂ ವರುಣಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ. ಶಂಕುಸ್ಥಾಪನೆ ಹಾಗೂ ಸರ್ಕಾರಿ ಸವಲತ್ತುಗಳ ವಿತರಣಾ ಸಮಾರಂಭ

ಉದ್ಘಾಟನೆ ಹಾಗೂ ಶಂಕುಸ್ಥಾಪನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಅಧ್ಯಕ್ಷತೆ
ಡಾ.ಹೆಚ್.ಸಿ. ಮಹದೇವಪ್ಪ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. ಹಾಗೂ ಮೈಸೂರು ಉಸ್ತುವಾರಿ ಜಿಲ್ಲಾ ಸಚಿವರು.

ಮುಖ್ಯ ಅತಿಥಿಗಳು:
ಸಚಿವರುಗಳಾದ
ಶ್ರೀ.ಟಿ.ಬಿ.ಜಯಚಂದ್ರ
ಶ್ರೀ.ಹೆಚ್.ಕೆ.ಪಾಟೀಲ್
ಶ್ರೀ ತನ್ವೀರ್ ಸೇಠ್
ಶ್ರೀ.ಎಚ್.ಆಂಜನೇಯ
ಶ್ರೀ.ಡಿ.ಕೆ.ಶಿವಕುಮಾರ್
ಶ್ರೀಕೃಷ್ಣ ಭೈರೇಗೌಡ
ಶ್ರೀಎಸ್.ಎಸ್.ಮಲ್ಲಿಕಾರ್ಜುನ
ಶ್ರೀ ಸಂತೋಷ್ ಲಾಡ್
ಶ್ರೀ ಆರ್.ರೋಷನ್ ಬೇಗ್
ಶ್ರೀ ಬಸವರಾಜರಾಯ ರೆಡ್ಡಿ,
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಮರಿತಿಬ್ಬೇಗೌಡ,ಉಪಸಭಾಪತಿಗಳು,
ಶ್ರೀಮತಿ ನಯಿಮಾ ಸುಲ್ತಾನ
ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು
ಸಂಸದರುಗಳಾದ
ಶ್ರೀ ಆರ್. ಧ್ರುವನಾರಾಯಣ್
ಶ್ರೀ ಪ್ರತಾಪ್ ಸಿಂಹ
ಶ್ರೀ ಸಿ.ಎಸ್.ಪುಟ್ಟರಾಜು

ಶಾಸಕರುಗಳಾದ
ಶ್ರೀ ಕೆ.ವೆಂಕಟೇಶ್
ಶ್ರೀ ಹೆಚ್.ಪಿ.ಮಂಜುನಾಥ್
ಶ್ರೀ ಎಂ.ಕೆ.ಸೋಮಶೇಖರ್
ಶ್ರೀ ವಾಸು
ಶ್ರೀ ಜಿ.ಟಿ.ದೇವೇಗೌಡ
ಶ್ರೀ ಸಾ.ರಾ.ಮಹೇಶ್
ಶ್ರೀ ಕಳಲೆ ಎನ್.ಕೇಶವಮೂರ್ತಿ
ನಿಗಮ-ಮಂಡಳಿ ಅಧ್ಯಕ್ಷರು
ಶ್ರೀ ಡಿ. ಧ್ರುವಕುಮಾರ್
ಶ್ರೀ ಜಿ. ಸಿದ್ದರಾಜು
ಶ್ರೀಮತಿ ಮಲ್ಲಿಗೆ ವೀರೇಶ್
ಶ್ರೀ ಹೆಚ್.ಎಸ್.ನಂಜಪ್ಪ
ಶ್ರೀ ಹೆಚ್.ಎ.ವೆಂಕಟೇಶ್
ಶ್ರೀ ನಂದಕುಮಾರ್ ಎನ್.
ಶ್ರೀ ಜಿ.ವಿ.ಸೀತಾರಾಮು
ಶ್ರೀ ಶಿವಾನಂದ ಎಸ್.ಪಾಟೀಲ್

ವಿಧಾನ ಪರಿಷತ್ ಸದಸ್ಯರು
ಶ್ರೀ ಎಸ್. ನಾಗರಾಜು
ಶ್ರೀ ಕೆ.ಟಿ. ಶ್ರೀಕಂಠೇ ಗೌಡ
ಶ್ರೀ ಆರ್. ಧರ್ಮಸೇನ
ಶ್ರೀ ಕೆ.ವಿ. ನಾರಾಯಣ ಸ್ವಾಮಿ
ಶ್ರೀ ಜಿ. ನಟರಾಜು
ಶ್ರೀ. ಸಿ. ಚಾಮೇಗೌಡ
ಶ್ರೀ ಸಿ. ಉಮೇಶ್ ಉ.ಪಾಪು
ಶ್ರೀಮತಿ ಎನ್. ಮಂಜುಳ
ಶ್ರೀಮತಿ ಸುಂದರಮ್ಮ
ಶ್ರೀಮತಿ ರತ್ನಮ್ಮ
ಶ್ರೀ ರಾಮಲಿಂಗೇಗೌಡ
ಶ್ರೀ ರಾಮಲಿಂಗಯ್ಯ
ಶ್ರೀ ಸುನೀಲ್ ಬೋಸ್
ಜಿ.ಪಂ. ಸದಸ್ಯರುಗಳು
ಶ್ರೀ ಎಂ. ಸುಧೀರ್
ಶ್ರೀಎಂ. ಅಶ್ವಿನ್‌ಕುಮಾರ್
ಶ್ರೀಮತಿ ಮಂಗಳಮ್ಮ
ಮಹಾದೇವಸ್ವಾಮಿ
ಶ್ರೀ.ಟಿ. ಮಂಜುನಾಥನ್
ಶ್ರೀಮತಿ ಜಯಮ್ಮ

ದಿನಾಂಕ:" 11-1-2018
ಗುರುವಾರ ಸಂಜೆ-4.00 ಗಂಟೆಗೆ
ಸ್ಥಳ: ಎಪಿಎಂಸಿ ಆವರಣ,
ನಂಜನಗೂಡು ರಸ್ತೆ, ತಿ. ನರಸೀಪುರ

ತಾಲ್ಲೂಕಿನ ಎಲ್ಲಾ ಗ್ರಾಮಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಹಾಗೂ ಚುನಾಯಿತ ಪ್ರತಿನಿಧಿಗಳು ಸರ್ವರಿಗೂ ಆದರದ ಸುಸ್ವಾಗತ

ಎಂ. ಲಕ್ಷ್ಮೀನಾರಾಯಣ ಭಾ.ಆ.ಸೇ.,
ಅಪರ ಮುಖ್ಯ ಕಾರ್ಯದರ್ಶಿಗಳು
ಲೋಕೋಪಯೋಗಿ ಇಲಾಖೆ ಹಾಗೂ
ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,

ಡಾ. ನಾಗಾಲಾಂಬಿಕದೇವಿ, ಭಾ.ಆ.ಸೇ.,
ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಎಂ.ವಿ. ಜಯಂತಿ, ಭಾ.ಆ.ಸೇ.,
ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ.

ಲಕ್ಷ್ಮಣರಾವ್ ಪೇಶ್ವೆ
ಮುಖ್ಯ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು

ಡಿ. ರಂದೀಪ್, ಭಾ.ಆ.ಸೇ.,
ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ

ರವಿ ಡಿ. ಚನ್ನಣ್ಣನವರ್, ಭಾ.ಪೊ.ಸೇ.,
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು,
ಮೈಸೂರು ಜಿಲ್ಲೆ

ಪಿ. ಶಿವಶಂಕರ್
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ, ಮೈಸೂರು.



ಶ್ರದ್ಧಾಂಜಲಿ

ನಿಮ್ಮ ಅಕಾಲಿಕ ಮರಣವೂ ನಮ್ಮೆಲ್ಲರಿಗೂ ದಿಗ್ಭ್ರಮೆಯಾಗಿದೆ. ಅತೀವ ದುಃಖವಾಗಿದೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಗುರುಮಲ್ಲೇಶ್ ಬಿ.ಹೆಚ್. ಶಿವಕುಮಾರ್ ಪಟೇಲ್

ಕೃಷಿ ಅಧ್ಯಯನ ಸಲುವಾಗಿ ರೈತರಿಗೆ ಇಸ್ರೇಲ್ ಪ್ರವಾಸ ಹಮ್ಮಿಕೊಳ್ಳಲಾಗಿದೆ. 14 ದಿವಸಗಳ ಪ್ರವಾಸವಾಗಿದ್ದು. ಬರುವಾಗ ದುಬೈ, ಅಬುದಾಬಿ ಪ್ರವಾಸ ಮುಗಿಸಿಕೊಂಡು ಸ್ವದೇಶಕ್ಕೆ ಬರುವುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
0821-4260111, 2362442
9448601201

ಆಂದೋಲನ
ನಮ್ಮ email ವಿಳಾಸ :
andolana@gmail.com
advtandolana@gmail.com

ಶ್ರದ್ಧಾಂಜಲಿ

ಹಿರಿಯ ಪತ್ರಕರ್ತ ಎಂ.ಅನೂಪ್‌ಕುಮಾರ್ ಅವರು 01-01-2018 ಸೋಮವಾರ ನಿಧನರಾದರೆಂದು ತಿಳಿಸಲು ತೀವ್ರ ವಿಷಾದಿಸುತ್ತೇವೆ. ತತ್ಸಂಬಂಧವಾಗಿ 12-01-2018 ಶುಕ್ರವಾರ ಮಧ್ಯಾಹ್ನ 12-00 ಗಂಟೆಗೆ ನಮ್ಮ ಸ್ವಗೃಹ ನಂ.447, 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 2ನೇ ಹಂತ, ಬೋಗಾದಿ ದಕ್ಷಿಣ, ಮೈಸೂರು ಇಲ್ಲಿ ಪ್ರಾರ್ಥನಾ ಕೂಟವನ್ನು ಆಯೋಜಿಸಲಾಗಿದೆ.

ಎಂ.ಅನೂಪ್ ಕುಮಾರ್
ಜನನ: 08-01-1967
ನಿಧನ: 01-01-2018

ದುಃಖ ತಪ್ತರು:
ಪತ್ನಿ, ಕುಟುಂಬವರ್ಗ, ಸಂಬಂಧಿಕರು ಮತ್ತು ಸ್ನೇಹಿತರು

BAJAJ FINSERV
ಗೋಲ್ಡ್ ಲೋನ್
ಭರವಸೆಯ ಸಾಲ*
ತ್ವರಿತ ಹಣ
GOLD ಎಂದು 56677 ಕ್ಕೆ SMS ಮಾಡಿ ಅಥವಾ
92890 17777 ಕ್ಕೆ ಮಿಸ್ಡ್ ಕಾಲ್ ಮಾಡಿ
2ನೇ ಮಹಡಿ, #328, ಜಯಲಕ್ಷ್ಮಿ ಆರ್ಕೇಡ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು - 570 024
ಕರ್ನಾಟಕದಲ್ಲಿ 24 ಶಾಖೆಗಳು | ಭಾರತದಲ್ಲಿ 276 ಶಾಖೆಗಳು

ಸಂಕ್ಷಿಪ್ತ ಜಾಹೀರಾತು
3X1 = ಕಾಲಂ 350ರೂ.
4X1 = ಕಾಲಂ 450ರೂ.

REGIONAL INSTITUTE OF EDUCATION
(National Council of Education Research and Training, New Delhi)
Mysore - 570 006 Ph: 0821-2511411, website: www.riemysore.ac.in

F.No.3/ST/Veh -hiring/RIEM/2017-18 Date: 10.01.2018

TENDER NOTIFICATION

Invited Tenders for Hiring of Vehicle (Staff Car) in sealed covers. For more details please logon to our website: **www. riemysore.ac.in**

Sd/- PRINCIPAL

೧೬ರಿಂದ ಶಿವಮೊಗ್ಗದಲ್ಲಿ 'ನನ್ನ ಹಾಡು ದಾಸರ ಹಾಡು'

ಮೈಸೂರು,ಜ.೧೦–ಶಿವಮೊಗ್ಗದ ಸೌರಭ, ಐಸಿರಿ ಭಕ್ತಿ ವಾಹಿನಿ, ದಾಸ ಸಾಹಿತ್ಯ ಪ್ರಾಜೆಕ್ಟ್, ಪೂರ್ಣಪ್ರಜ್ಞ ಸೇವಾ ಸಮಿತಿ, ಗುರುಗುಹ ಸಂಗೀತ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಫೆ. ೧೬, ೧೭ ಮತ್ತು ೧೮ರಂದು ರಾಜ್ಯಮಟ್ಟದ ದಾಸರ ಪದ ಗಾಯನ ಸ್ಪರ್ಧೆ 'ನನ್ನ ಹಾಡು ದಾಸರ ಹಾಡು' ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ ೨ ಲಕ್ಷ ರೂ., ದ್ವಿತೀಯ ಬಹುಮಾನವಾಗಿ ೧ ಲಕ್ಷ ರೂ., ತೃತೀಯ ಬಹುಮಾನವಾಗಿ ೫೦ ಸಾವಿರ ರೂ. ನೀಡಲಾಗುತ್ತದೆ. ೧೦ ಸಾವಿರ ರೂ.ಗಳ ೫ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುತ್ತದೆ. ಸ್ಪರ್ಧಿಗಳ ವಯೋಮಾನದ ಮಿತಿಯು ೨೧ರಿಂದ ೪೫ ವರ್ಷಗಳವರೆಗೆ ಮಾತ್ರ ಇರುತ್ತದೆ. ದಾಸ ಸಾಹಿತ್ಯ ಬಿಟ್ಟು ಬೇರೆ ಏನನ್ನೂ ಹಾಡಲು ಅವಕಾಶವಿರುವುದಿಲ್ಲ. ಸ್ಪರ್ಧಿಗಳು ಫೆ. ೪ರೊಳಗೆ ಅರ್ಜಿ ಸಲ್ಲಿಸಬಹುದು. ವಿವರಗಳಿಗೆ ಮೊ.ಸಂ.: ೯೮೪೫೧೮೪೯೫೨, ೮೮೬೧೨೧೩೫೬೭, ೯೮೮೬೧೦೮೪೫೦ ಸಂಪರ್ಕಿಸಬಹುದು ಎಂದರು.

ಆಧಾರ್‌ಗೆ 'ಪರ್ಯಾಯ ಗುರುತಿನ ಚೀಟಿ'

ಹೊಸದಿಲ್ಲಿ,ಜ.೧೦– ಆಧಾರ್‌ನಲ್ಲಿರುವ ವೈಯಕ್ತಿಕ ವಿವರಗಳನ್ನು ಕಾಪಾಡುವ ಉದ್ದೇಶದಿಂದ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಪರ್ಯಾಯ ಗುರುತಿನ ಚೀಟಿ (ವರ್ಚ್ಯುವಲ್ ಐಡಿ) ಪರಿಕಲ್ಪನೆಯನ್ನು ಬುಧವಾರ ಪರಿಚಯಿಸಿದೆ.

ಆಧಾರ್ ಕಾರ್ಡ್‌ದಾರರು ಯುಐಡಿಎಐ ಅಧಿಕೃತ ವೆಬ್‌ಸೈಟ್‌ನಿಂದ ೧೬ ಸಂಖ್ಯೆಗಳ ಪರ್ಯಾಯ ಗುರುತಿನ ಚೀಟಿ ಪಡೆಯಬಹುದಾಗಿದೆ. ಮೊಬೈಲ್ ಸಿಮ್ ಸಂಸ್ಥೆಗಳಿಗೆ ದೃಢೀಕರಣಕ್ಕೆ ಹಾಗೂ ವಿವಿಧ ಸೇವೆಗಳನ್ನು ಪಡೆಯಲು ಅದನ್ನು ಬಳಸಬಹುದು. ಈ ವರ್ಚ್ಯುವಲ್ ಐಡಿ ಹೆಸರು, ವಿಳಾಸ, ಫೋಟೋದಂತಹ ಸೀಮಿತ ಮಾಹಿತಿ ಹೊಂದಿರಲಿದ್ದು, ಸಿಮ್ ಪರಿಶೀಲನೆಗೂ ಇದೇ ಬಳಕೆ ಮಾಡಬಹುದು. ಹಾಗಾಗಿ ವಿವಿಧ ಸೇವೆಗಳನ್ನು ಪಡೆಯಲು ಜನರು ತಮ್ಮ ಆಧಾರ್ ಸಂಖ್ಯೆಯನ್ನೇ ನೀಡಬೇಕಾಗಿಲ್ಲ.

ಈ ಹೊಸ ವ್ಯವಸ್ಥೆ ಅಡಿ ಬಳಕೆದಾರ ಎಷ್ಟು ಬೇಕಾದರೂ ಪರ್ಯಾಯ ಗುರುತಿನ ಚೀಟಿಗಳನ್ನು ಪಡೆಯಬಹುದು. ಆದರೆ, ಹೊಸ ವರ್ಚ್ಯುವಲ್ ಐಡಿ ಪಡೆದ ಕೂಡಲೇ ಹಳೆಯದ್ದು ತನ್ನಿಂತಾನೇ ರದ್ದಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕರ್ನಾಟಕ ಬ್ಯಾಂಕ್
ರಿಜಿಸ್ಟರ್ಡ್ ಮತ್ತು ಪ್ರಧಾನ ಕಛೇರಿ, ಮಂಗಳೂರು - 575002
ಶಾಖೆ : ಡಿ.ದೇವರಾಜ ಅರಸು ರಸ್ತೆ, ಮೈಸೂರು. ದೂ: 0821-2417571
D.No. 82-85, 1ನೇ ಮಹಡಿ, ಡಿ. ದೇವರಾಜ ಅರಸ್ ರಸ್ತೆ, ಮೈಸೂರು-570 001.

ಏಲಂ ನೋಟೀಸ್

ಈ ಕೆಳಗಿನ ಸಾಲಗಾರರು ನಮ್ಮ ಶಾಖೆಯಿಂದ ಚಿನ್ನಾಭರಣ ಒಡವೆಗಳ ಭದ್ರತೆಯ ಮೇಲೆ ಪಡೆದ ಸಾಲವನ್ನು ಸರಿಯಾಗಿ ಮರುಪಾವತಿ ಮಾಡದೆ [illegible] ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು [illegible] ತಾರೀಖು : 29-1-2018 ರ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, [illegible] ತಾ : 30-1-2018 ಅಪರಾಹ್ನ ಗಂಟೆ 4.00 ಕ್ಕೆ ಸರಿಯಾಗಿ ಬ್ಯಾಂಕಿನ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. [illegible] ತಿಳಿದಿರಲಿ.

ಸಾಲದ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು
PSGL-1281	ಶ್ರೀಮತಿ ಉಮಾ.N W/O ಸುಂದರ್.N, ನಂ.729/2, ತ್ಯಾಗರಾಜ ರಸ್ತೆ, 3ನೇ ಕ್ರಾಸ್, ಕೆಆರ್ ಮೊಹಲ್ಲಾ ಮೈಸೂರು.	171700/-
PSGL-1741	ಶ್ರೀ ರಮೇಶ್.ಕೆ. S/O ಕುಚೇಲಾ ನಂ 111, 5ನೇ ಕ್ರಾಸ್ ಕುರುಬಾರಹಳ್ಳಿ, ಮೈಸೂರು	143100/-
PSGL-1910	ಅಬ್ದುಲ್ ವಾಜೀದ್, ನಂ HIG-69 ಹುಡ್ಕೊ, ಮುಖ್ಯರಸ್ತೆ, ಬನ್ನಿಮಂಟಪ B ಬಡಾವಣೆ ಮೈಸೂರು.	45700/-
PSGL-1911	DO	50300/-
PSGL-1912	DO	58200/-
PSGL-2124	DO	95000/-
PSGL-2125	DO	124300
PSGL-2229	ಶ್ರೀ ಶಿವಕುಮಾರ್.ಎಸ್, S/O ಸಂಕಪ್ಪ ನಂ 218, ಬೀರಹುಂಡಿ, ಜಯಪುರ ಹೋಬಳಿ, ಮೈಸೂರು.	116100/-
PSGL-2305	ಶ್ರೀ ಶಾಮ್.R S/O ರಾಜು ನಂ.140, 4th ಕ್ರಾಸ್, ಮಥುರಾ ನಗರ, ಮೇಟಗಳ್ಳಿ, ಮೈಸೂರು.	156850/-
PSGL-2330	ಶ್ರೀ ರವಿ S/O ಬಸವಯ್ಯ, ನಂ.294, ತುಂಬುನೇರಳೆ, ನಂಜನಗೂಡು ತಾ॥, ಮೈಸೂರು ಜಿಲ್ಲೆ.	45600/-

ಸ್ಥಾಪನೆ : 1910
ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ.,
ಶ್ರೀ ಹರ್ಷ ರಸ್ತೆ, ಮೈಸೂರು–570001. ಫೋ: 2520026

ಹರಾಜು ಮಾರಾಟ

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು +ಅಸಲು+ ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1.	ಶಿವರಾಜ್ S/O ಪುಟ್ಟಸ್ವಾಮಿ ಲೆಕ್ಕದ ಸಂಖ್ಯೆ: 632200	109787	1200000	1.2.2018 ಬೆಳಿಗ್ಗೆ 11ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ CH ಮೊಹಲ್ಲ ಸಿದ್ದಾರ್ಥ ಹಾಸ್ಟೆಲ್ ರಸ್ತೆ, 13ನೇ ಕ್ರಾಸ್ ಮನೆ ನಂ.CH 11 ಪೂ+ಪ–40 ಅಡಿ, ದಕ್ಷಿಣ+ಉತ್ತರ 30 ಅಡಿ ಪೂ– ಪುಟ್ಟಲಿಂಗಯ್ಯ ಮನೆ, ಪ–ರಸ್ತೆ ಉ– ಚಾಮಯ್ಯನವರ ಮನೆ, ದಕ್ಷಿಣಕ್ಕೆ ರಸ್ತೆ.
2	ರೆಹಮತ್ತುನ್ನಿಸ್ಸಾ W/O ಅನ್ವರ್ ಬೇಗ್ ಲೆಕ್ಕದ ಸಂಖ್ಯೆ: 632540	424132	4000000	2.2.2018 ಬೆಳಿಗ್ಗೆ 11 ಗಂಟೆಗೆ, ಸ್ವತ್ತಿನ ಬಳಿ	ಮೈಸೂರು ನಗರ ಲಷ್ಕರ್ ಮೊಹಲ್ಲ, ಸುನ್ನಿ ಚೌಕ ಕೆ.ಟಿ. ರಸ್ತೆ, ಮನೆ ನಂ. 3160, M325 ಪೂ+ಪ 65 ಅಡಿ, ದ+ಉ 23 ಅಡಿ. ಪೂ– ಖಾಸಗಿ ಸ್ವತ್ತು ಪ–ಕೆ.ಟಿ. ರಸ್ತೆ, ಉ– ಖಾಸಗಿ ಮನೆ, ದ–ಖಾಸಗಿ ಮನೆ
3.	ಬಸಮ್ಮ W/O ಶ್ರೀಧರ ಲೆಕ್ಕದ ಸಂಖ್ಯೆ: 632587	396696	12000000	3.2. 2018 ಬೆಳಿಗ್ಗೆ11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಕೆ.ಆರ್. ಮೊಹಲ್ಲ ಸುಣ್ಣದ ಕೇರಿ, 7ನೇ ಕ್ರಾಸ್, ಮನೆ ನಂ. 979, ಪೂ+ಪ 14 ಅಡಿ, ದ+ಉ 15 ಅಡಿ, ಪೂ– ಸಿದ್ದಯ್ಯರವರ ಮನೆ, ಪ– ಸಿದ್ದಮ್ಮ ಮನೆ, ಉ– ಖಾಸಗಿ ಸ್ವತ್ತು, ಉತ್ತರಕ್ಕೆ–ರಸ್ತೆ
4.	ಟಿ.ಎನ್. ನಾಗರಾಜು S/O ನಂಜುಂಡೇಗೌಡ ಲೆಕ್ಕದ ಸಂಖ್ಯೆ: 632588	846901	2280000	6.2.2018 ಬೆಳಿಗ್ಗೆ 11ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ CHಮೊಹಲ್ಲ, ಗಂಗೋತ್ರಿ ಬಡಾವಣೆ, 11 ಕ್ರಾಸ್ ಮನೆ ನಂ. EWS 157 ಪೂ+ಪ 3.6 ಮೀಟರ್, ದ+ಉ 11 ಮೀಟರ್ ಪೂ– ಮನೆ ನಂ.158, ಪ–ರಸ್ತೆ, ಉತ್ತರಕ್ಕೆ–ರಸ್ತೆ ದಕ್ಷಿಣಕ್ಕೆ–ಮೋರಿ.
5.	ಮಹಮದ್ ವಾಜಿದ್ S/O ಸಾಬಜಾನ್ ಲೆಕ್ಕದ ಸಂಖ್ಯೆ: 632678	271017	800000	7.2.018 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಬಡಾಮಕಾನ್ ಟಿಪ್ಪು ಸರ್ಕಲ್ ಮನೆ ನಂ. 252, ಪೂ+ಪ 18 ಅಡಿ, ದ+ಉ 25 ಅಡಿ, ಪೂ–ಗಲ್ಲಿ, ಪ– ಮನೆ ನಂ. 235 ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ, ITI, Compund.

ಹರಾಜಿನ ನಿಯಮ ಮತ್ತು ನಿಬಂಧನೆಗಳು:

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000ಗಳನ್ನು ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇರಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಿಗಿನ ಶೇ.25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ.ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ.25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು/ ಪ್ರಾಸಂಗಿಕ ಖರ್ಚು–ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು. ದೂರವಾಣಿ: 2520026/ 2420829

ದಿನಾಂಕ: 10-1-2018
ಸ್ಥಳ: ಮೈಸೂರು
ಅಧಿಕೃತ ಅಧಿಕಾರಿ
ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ., ಮೈಸೂರು.